ಈಗ ಅವರು ಡ್ಯಾಮ್ ಕಟ್ಟಿದ ಮೇಲೆ ಕೊಡುತ್ತಾರೆಂದರೆ ಆಗುವುದಿಲ್ಲ. ಏಕೆಂದರೆ ಗುಲ್ಬರ್ಗಾದ ಎಲ್ಲಾ ಪಟ್ಟಣಗಳಿಗೆ ನೀರು ಒದಗಿಸುತ್ತಿರುವಂಥಾದ್ದು ಭೀಮ ನದಿಯಿಂದ ಮಾತ್ರ ಸಾಧ್ಯ, ಆದುದರಿಂದ ತಾವು ಇದಕ್ಕೆ ಏನು ಹೇಳುತ್ತೀರಿ?

ಶ್ರೀ ಕೆ. ಎನ್. ನಾಗೇಗೌಡ :- ಅವರು ಕುಡಿಯುವ ನೀರಿನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಈ ಕೂಡಲೇ ಮಹಾರಾಷ್ಟ್ರದ ಮಂತ್ರಿಗಳು, ಮುಖ್ಯ ಕಾರ್ಯದರ್ಶಿ ಹಾಗೂ ಇತರೆ ಅಧಿಕಾರಿಗಳ ಜೊತೆ ಮಾತನಾಡಿ ಮಾಹಿತಿಗಳು ಏನಿವೆ ಅವನ್ನು ಪಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಎರಡನೆಯದು, ಬಚಾವತ್ ಅವಾರ್ಡ್ ಪ್ರಕಾರ ನಮ್ಮ ಕರ್ನಾಟಕ ರಾಜ್ಯಕ್ಕೆ ಎಷ್ಟು ನೀರು ಬರಬೇಕು ಅದನ್ನು ಸಂಪೂರ್ಣವಾಗಿ ಬಳಸಿಕೊಳ್ಳಲಾಗುವುದು; ಅದನ್ನು ಬಿಡುವುದಿಲ್ಲ.

ಅಧ್ಯಕ್ಷರು :- ಈಗ ಶೂನ್ಯ ವೇಳೆ, ಶ್ರೀ ಜಗದೀಶ್ ತಿಮ್ಮನಗೌಡ ಪಾಟೀಲ್ ಹಾಗೂ ಬಸವನ ಗೌಡರು ಮಾತನಾಡುವುದು.

(ಆ) ಆಲಮಟ್ಟಿ ಜಲಾಶಯದ ನೀರಿನಿಂದಾಗಿ ಕೆಲವು ಹಳ್ಳಿಗಳ ಜಲಾವೃತವಾಗಿರುವುದು.

+ **ಶ್ರೀ ಜಗದೀಶ್ ತಿಮ್ಮನಗೌಡ ಪಾಟೀಲ್ (ಬೀಳಗಿ ಕ್ಷೇತ್ರ)** :- ಸನ್ಮಾನ್ಯ ಅಧ್ಯಕ್ಷರೆ, ಆಲಮಟ್ಟಿ ಜಲಾಶಯದ ನೀರಿನಿಂದಾಗಿ ಎರಡು-ಮೂರು ದಿವಸಗಳಿಂದ ಸುಮಾರು ಇಪ್ಪತ್ತು ಇಪ್ಪತ್ತೈದು ಹಳ್ಳಿಗಳು ಜಲಾವೃತವಾಗಿವೆ. ಬೀಳಗಿ ತಾಲ್ಲೂಕಿನಲ್ಲಿ ಹದಿಮೂರು ಹಳ್ಳಿಗಳು ಮುಳುಗಡೆಯಾಗಿವೆ, ಜನರನ್ನು ಶಿಫ್ಟ್ ಮಾಡತಕ್ಕಂಥ ಕೆಲಸ ನಾಲ್ಕೈದು ದಿವಸಗಳಿಂದ ನಡೆಯುತ್ತಿದೆ. ಈ ದುರ್ದೈವದಿಂದ ಪುನರ್ವಸತಿ ಕೇಂದ್ರಗಳಲ್ಲಿ ಇದುವರೆವಿಗೂ ಯಾವುದೇ ವಿದ್ಯುತ್ ಸರಬರಾಜಿಲ್ಲ, ಕುಡಿಯುವ ವ್ಯವಸ್ಥೆ ಇಲ್ಲ, ಔಷಧ ಪೂರೈಕೆ ಇಲ್ಲ ಅದು ಅಲ್ಲದೆ ಆಹಾರಧಾನ್ಯದ ಪೂರೈಕೆಯೂ ಕೂಡ ಇಲ್ಲ. ಈಗಾಗಲೇ ಕೆಲವು ಹಳ್ಳಿಗಳಲ್ಲಿ ವಿಷಜಂತುಗಳು, ವಿಷಸರ್ಪಗಳು ಬಂದು ಜನರನ್ನು ಕಚ್ಚಿದ ಪ್ರಸಂಗ ಬಂದಿದೆ. ಅದೂ ಅಲ್ಲದೆ ನಾನು ಹೋದ ದಿವಸ ಎಂಟು-ಹತ್ತು ವಿಷಸರ್ಪಗಳನ್ನು ಆ ಬೀರಕಬ್ಬ ಎನ್ನುವಂಥ ಹಳ್ಳಿಯಲ್ಲಿ ಕೊಂದು ಹಾಕಿದ್ದರು. ಅದೂ ಅಲ್ಲದೆ, ಈ ರೀತಿ ದನಕರುಗಳಿಗೆ ಮೇವಿನ ವ್ಯವಸ್ಥೆಯನ್ನೂ ಕೂಡ ಮಾಡಿಲ್ಲ. ಈ ಪುನರ್ವಸತಿ ಕೇಂದ್ರದ ಜನರಿಗೆ ದಿಕ್ಕು ತೋಚದಂತಾಗಿದೆ. ಈ ದಿಸೆಯಲ್ಲಿ ಸರ್ಕಾರ ಸ್ಪಷ್ಟವಾಗಿ ನಿಲುವನ್ನು ತಾಳಿ, ಬೇಗನೆ ಕ್ರಮ ಕೈಗೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ಆದೂ ಅಲ್ಲದೇ, ಈ ಅಧಿಕಾರಿಗಳ ತಪ್ಪು ಸರ್ವೇಯಿಂದ, ಈ ಮೊದಲನೇ ಹಂತದಲ್ಲಿ ಜಮೀನು ಮುಳುಗುವುದಿಲ್ಲವೆಂದು ತಿಳಿದುಕೊಂಡು ಯಾವ ಜಮೀನನ್ನೂ ಸರ್ವೇ ಮಾಡಿಲ್ಲ, ಇವತ್ತು ಆ ಕಂದಗಲ್ಲು ಎನ್ನುವ ಗ್ರಾಮದಲ್ಲಿ ಎರಡನೂರು ಎಕರೆ ಸ್ಟ್ಯಾಂಡಿಂಗ್ ಕ್ರಾಪ್ ಮುಳುಗಡೆಯಾಗಿದೆ. ಇದರಿಂದಾಗಿ ಒಂದೇ ಊರಿನಲ್ಲಿ ಕನಿಷ್ಟ ಇಪ್ಪತ್ತೈದರಿಂದ ಮೂವತ್ತು ಲಕ್ಷ ರೂಪಾಯಿಗಳು ನಷ್ಟವಾಗಿದೆ. ಇದಲ್ಲದೆ ಇನ್ನೂ ಬೇರೆ ಬೇರೆ ಗ್ರಾಮಗಳಲ್ಲಿ ಎರಡು-ಮೂರು ಎಕರೆ ಸ್ಟ್ಯಾಂಡಿಂಗ್‌ಕ್ರಾಪ್,

ಬೆಳೆ ಮುಳುಗಡೆಯಾಗಿ ಕನಿಷ್ಟ 50-60 ಲಕ್ಷ ರೂಪಾಯಿಗಳ ನಷ್ಟವಾಗಿದೆ. ಆದಕ್ಕೆ, ಸರ್ಕಾರ, ಈ ಬೆಳೆಯನ್ನು ಕಳೆದುಕೊಂಡಂಥ ರೈತರಿಗೆ ಪರಿಹಾರವನ್ನು ಕೊಡಬೇಕೆಂದು ನಾನು ಸ್ಪಷ್ಟವಾಗಿ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇದಕ್ಕೆ ನಾನು ತಮ್ಮಿಂದ ಸ್ಪಷ್ಟವಾಗಿ ಉತ್ತರವನ್ನು ಅಪೇಕ್ಷೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಆರ್. ಪಾಟೀಲ್ (ಬಜಾಪುರ) :– ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ಮತ್ತು ಮೊನ್ನೆ ಸುಮಾರು ಇಪ್ಪತ್ತು ಹಳ್ಳಿಗಳ ಪುನರ್ವಸತಿಯ ಒಂದು ಪ್ರದೇಶಕ್ಕೆ ಹೋಗಿದ್ದೆ. ಬಹಳ ಭೀಕರವಾದಂಥ ಛಾಯೆ ಅಲ್ಲಿ ಮೂಡಿದೆ. ಕನಿಷ್ಟ ಇಪ್ಪತ್ತು ಹಳ್ಳಿಗಳು ಮುಳುಗಡೆಯಾದಂಥ ಪರಿಸ್ಥಿತಿಯಲ್ಲಿ, ನಾನು ನಿನ್ನೆ ಹೊನ್ಯಾಳ ಗ್ರಾಮಕ್ಕೆ ಹೋದಾಗ, ಆ ಗ್ರಾಮ ಸಂಪೂರ್ಣವಾಗಿ ಜಲಾವೃತವಾಗಿದೆ. ಬೀಳಗಿ ತಾಲ್ಲೂಕಿನಲ್ಲಿ ಸುಮಾರು 15 ಹಳ್ಳಿಗಳು, ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ 3 ಹಳ್ಳಿಗಳು, ಬಾಗಲ ಕೋಟೆ ತಾಲ್ಲೂಕಿನಲ್ಲಿ 3 ಹಳ್ಳಿಗಳು ಆವತ್ತು ಸಂಪೂರ್ಣವಾಗಿ ನೀರಿನಲ್ಲಿ ಮುಳುಗಿದ್ದವು. ಸನ್ಮಾನ್ಯ ಅಧ್ಯಕ್ಷರೆ, ಈ ಪರಿಸ್ಥಿತಿ ಬರುವುದಕ್ಕಿಂತ ಮುಂಚೆ ಸಂಬಂಧಪಟ್ಟಂಥ ಆ ಗ್ರಾಮಗಳ ಜನರಿಗೆ ತಿಳಿಸಿ ಅಲ್ಲಿನ ಪುನರ್ವಸತಿ ಕೇಂದ್ರಗಳಿಗೆ ವ್ಯವಸ್ಥೆ ಮಾಡಬೇಕಾಗಿತ್ತು. ಆದರೆ ಸರ್ಕಾರ ಅವರಿಗೆ ಕೇವಲ ಸ್ಥಳವನ್ನು ಖಾಲಿ ಮಾಡಲಿಕ್ಕೆ ಸೂಚನೆಯನ್ನು ಕೊಟ್ಟರೂ ಕೂಡ ಪುನರ್ವಸತಿ ಕೇಂದ್ರಗಳಲ್ಲಿ ಯಾವುದೇ ರೀತಿಯ ಸೌಕರ್ಯಗಳಿಲ್ಲ. ವಿಶೇಷವಾಗಿ ಮೊದಲನೆಯದಾಗಿ, ಕುಡಿಯುವ ನೀರಿಗೆ ಬಹಳ ಗಂಭೀರವಾದ ಪರಿಸ್ಥಿತಿ ಇದೆ. ಸರ್ಕಾರ ಯಾವ ಪುನರ್ವಸತಿ ಕೇಂದ್ರಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕಾಗಿತ್ತು, ಇಲ್ಲಿಯವರೆವಿಗೂ ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಟ್ರಕ್‌ಗಳ ಮುಖಾಂತರ ಟ್ಯಾಂಕರ್‌ಗಳ ಮುಖಾಂತರ ನೀರನ್ನು ತರುವಂಥ ವ್ಯವಸ್ಥೆಯನ್ನು ಮಾಡಿದೆ. ದೀಪದ ವ್ಯವಸ್ಥೆ ಇಲ್ಲದೇ ಇರುವಂಥ, ಅಂಥ ಒಂದು ಕೆಟ್ಟ ಪರಿಸ್ಥಿತಿಯಲ್ಲಿ ಆ ಪುನರ್ವಸತಿ ಕೇಂದ್ರದಲ್ಲಿ ಜೀವನ ಮಾಡುತ್ತಿದ್ದಾರೆ. ಕೇವಲ ಎಂಟು ಬೈ ಹತ್ತು ಅಡಿ ಇರುವಂಥ ಶೆಡ್ಡಿನಲ್ಲಿ ಆ ಕಡೆಯಿರುವ ಕುಟುಂಬಗಳು, ಈ ಕಡೆ ಇರುವ ಕುಟುಂಬಗಳು, ಕಾಣಿಸುವಂಥ ಕೆಟ್ಟ ಪರಿಸ್ಥಿತಿಯಿಂದ ಗಂಡ ಹೆಂಡತಿಯರಿಬ್ಬರು ಮಲಗಿ ಕೊಳ್ಳಲು ಸಾಧ್ಯವಿರುವುದಿಲ್ಲ. ಅವರ ದನಕರುಗಳಿಗೂ ಸಹ ಯಾವುದೇ ರೀತಿಯ ಒಂದು ವ್ಯವಸ್ಥೆ ಇರಲಾರದಂಥ ಕೆಟ್ಟದಾದ ಒಂದು ಭೀಕರವಾದ ಪರಿಸ್ಥಿತಿಯಲ್ಲಿ ಅವರು ಇವತ್ತು ಅಲ್ಲಿ ಜೀವನ ಮಾಡುವಂಥ ವ್ಯವಸ್ಥೆ ನಿರ್ಮಾಣವಾಗಿದೆ. ಸನ್ಮಾನ್ಯ ಅಧ್ಯಕ್ಷರೆ, ನಾವು ನಿನ್ನೆ ಹೋದಾಗ, ಇವತ್ತು ಅನೇಕ ಕಾನೂನಿನ ತೊಡಕಿನಿಂದ ಅಲ್ಲಿಯ ಜನರು ಭಯಭೀತರಾಗಿದ್ದಾರೆ. ಇಪ್ಪತ್ತೈದು ಎಕರಿಗಿಂತ ಹೆಚ್ಚಿನ ಜಮೀನ್ದಾರರಿಗೆ ಪುನರ್ವಸತಿ ಕೇಂದ್ರಗಳಲ್ಲಿ ಸೌಲಭ್ಯವನ್ನು ಕಲ್ಪಿಸಲಾಗಿಲ್ಲವೆನ್ನುವ ಒಂದು ಮಾತನ್ನು ಇವತ್ತು ಗಂಭೀರವಾಗಿ ಹೇಳಬೇಕಾಗುತ್ತದೆ. ಪುನರ್ವಸತಿ ಕೇಂದ್ರಗಳಲ್ಲಿ ಸರ್ಕಾರ ಅವರಿಗೇನು ಮನೆಯನ್ನು ಕಟ್ಟಿಕೊಡುವುದಕ್ಕೆ ವ್ಯವಸ್ಥೆ ಮಾಡಬೇಕಾಗಿತ್ತು, ಆದರೆ ಸರ್ಕಾರ ಪರಿಹಾರ ಧನವನ್ನು ಕೊಡುವುದಷ್ಟೇ ತನ್ನ ಜವಾಬ್ದಾರಿ ಎಂದು ತಿಳಿದುಕೊಳ್ಳಲಾರದೆ, ಕರ್ನಾಟಕ ಗೃಹಮಂಡಳಿಯ ವತಿಯಿಂದ ಆ ಪುನರ್ವಸತಿ ಕೇಂದ್ರಗಳಲ್ಲಿ ಮನೆಗಳನ್ನು ಕಟ್ಟಿಕೊಟ್ಟಿದ್ದರೆ, ನಿಜವಾಗಿಯೂ ಅವರಿಗೆ ಒಂದು ಒಳ್ಳೆಯ ಸದುಪಯೋಗವಾಗುತ್ತಿತ್ತು....

ಅಧ್ಯಕ್ಷರು :- ಭಾಷಣ ಇಲ್ಲ, ನಾನು ನಿಮಗೆ ನನ್ನ ಕಛೇರಿಗೆ ಬಂದಾಗ ಹೇಳಿದ್ದೇನೆ. ಎರಡು ನಿಮಿಷಗಳಲ್ಲಿ ಅಲ್ಲಿಯ ಸ್ಥಿತಿಯ ಗಂಭೀರತೆಯ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುವುದಷ್ಟೆ.

ಶ್ರೀ ಬಿ. ಆರ್. ಪಾಟೀಲ್ :- ಅಧ್ಯಕ್ಷರೆ, ಇನ್ನೊಂದು ವಿಷಯವಾಗಿದೆ ಎಂದರೆ, ಯಾರು ಬಿಜಾಪುರದಲ್ಲಿ ಭೂಮಿಯನ್ನು ಕಳೆದುಕೊಂಡಿದ್ದಾರೆ ಅವರಿಗೆ ಸರ್ಕಾರದ ಹುದ್ದೆಗಳಲ್ಲಿ ಹುದ್ದೆಗಳನ್ನು ಕಾಯ್ದಿರಿಸುವಂಥ ಕೆಲಸವನ್ನು ಇವತ್ತು ಮಾಡಬೇಕಾಗಿದೆ. ಏಕೆಂದರೆ, ಅವರು, ಅನೇಕ ಜನರು ಸಂಪೂರ್ಣವಾಗಿ ಪೂರ್ತಿ ಜಮೀನನ್ನು ಕಳೆದು ಕೊಂಡಿದ್ದಾರೆ, ಸರ್ಕಾರ, ಇದನ್ನು ದಯವಿಟ್ಟು ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಶ್ರೀ ಕೆ. ಎಸ್. ನಾಗೇಗೌಡ (ಭಾರಿ ನೀರಾವರಿ ಸಚಿವರು) :- ಮಾನ್ಯ ಸಭಾಧ್ಯಕ್ಷರೆ, ನಾನು ಈಗ ಫ್ಯಾಕ್ಸ್‌ಅನ್ನು ತರಿಸಿದ್ದೇನೆ, ನಿನ್ನೆ ನಾನು ಫೋನ್‌ನಲ್ಲೂ ಕೂಡ ಜಾಮ್‌ದಾರ್ ಎಂದು ಪುನರ್ವಸತಿ ಅಧಿಕಾರಿ ಯಾರಿದ್ದಾರೆ ಅವರ ಜೊತೆ ಮಾತನಾಡಿದ್ದೇನೆ. ಈಗಲೂ ಕೂಡ ಲೇಟೆಸ್ಟ್ ಆಗಿ ಇವತ್ತು ಆಲಮಟ್ಟಿ ಅಣೆಕಟ್ಟು ನೀರು ತುಂಬಿ ಆಫೆಕ್ಟ್ ಆಗಿರತಕ್ಕಂಥವು ಇಪ್ಪತ್ತು ಹಳ್ಳಿಗಳು. ಅಲ್ಲಿ ಆಲಮಟ್ಟಿಯಲ್ಲಿ ನಮ್ಮ ಅಣೆಕಟ್ಟಿನ ಎತ್ತರ 506 ಇರುವುದು. ಆ 506 ಮೇಲೆ ಎಂದರೆ 508.9 ಗೆ ಅಂದರೆ ಆಲ್‌ಮೋಸ್ಟ್ ಆಲ್ 509.2 ಅಂದರೆ 509.2 ವರೆಗೆ ನೀರು ಬಂದಿದೆ ನೀರು ಬಂದು ಒಟ್ಟಾಗಿ 20-21 ಹಳ್ಳಿಗಳು ಆಫೆಕ್ಟ್ ಆಗಿದೆ, ನಾಲ್ಕು ಹಳ್ಳಿಗಳು ಸಂಪೂರ್ಣವಾಗಿ ಜಲಾವೃತವಾಗಿದೆ, ಉಳಿದ ಹಳ್ಳಿಗಳಿಗೆ ಒಂದೊಂದು ರೀತಿಯಲ್ಲಿ ಆಫೆಕ್ಟ್ ಆಗಿದ್ದಾವೆ. ಪಾರ್ಷಿಯಲಿ ಜಾಲಾವೃತವಾಗಿದೆ, ಮತ್ತೊಂದು ರೀತಿಯಲ್ಲಿ ಆಫೆಕ್ಟ್ ಆಗಿದೆ. ಅವರು ಈ ಎಲ್ಲಾ ಹಳ್ಳಿಗಳಿಗೆ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ; ನಮ್ಮ ಮಾನ್ಯ ಸ್ನೇಹಿತರು ಬಹಳ ಸಂತೋಷ ಪಡುತ್ತಾರೆಂದು ಅಂದುಕೊಂಡಿದ್ದೆ. ಏಕೆಂದರೆ ಒಂದು ಅತ್ಯುತ್ತಮವಾದ ಕೆಲಸವನ್ನು ಅಲ್ಲಿ ಮಾಡಿದ್ದಾರೆ, ಅದನ್ನು ನಾನು ಹೋಗಿ ನೋಡಿಕೊಂಡು ಬಂದಿದ್ದೇನೆ. ಈಗ ನೋಡದೆ ಇದ್ದರೂ ಹಿಂದೆ ನೋಡಿದ್ದೇನೆ. ಕಳೆದ ಸಲ ಹೋದಾಗಲೂ ಸಹ ನೋಡಿದ್ದೇನೆ. ಅಲ್ಲಿರತಕ್ಕಂಥ ಅಧಿಕಾರಿಗಳು ಕಂಟಿಂಜೆನ್ಸಿ ಫ್ಲಾನ್‌ನಲ್ಲಿ, ಇವರಿಗೆ ಉಚಿತವಾಗಿ ಆಹಾರವನ್ನು ವಿತರಣೆ ಮಾಡಿದ್ದಾರೆ; ಇವರಿಗೆ ನೀರಿನ ಸರಬರಾಜಿನ ವ್ಯವಸ್ಥೆ ಮತ್ತೊಂದು ಆಸ್ಪತ್ರೆ ಸೌಕರ್ಯ, ಆರೋಗ್ಯ ಸೌಕರ್ಯವನ್ನು ಮಾಡಿದ್ದೇವೆ, ಬೋಟ್ ಅನ್ನು ಹಾಕಿ ಆ ಜನರನ್ನು ಸಾಗಿಸುವಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಜೊತೆಗೆ ನಿಮಗೆ ಹೇಳುವುದಾದರೆ, ಇದು ಕಳೆದ ಹತ್ತು ವರ್ಷಗಳಿಂದ ಆಗಿರಲಿಲ್ಲ. ಅಧ್ಯಕ್ಷರೆ, ಕೊಯಿನಾ ಡ್ಯಾಂ ಒಂದರಲ್ಲಿ 1,81,000 ಕೂಸೆಕ್ಸ್ ಅಂದರೆ approximately it comes to about 17 TMC, that means ಕಬಿನಿನಲ್ಲಿ ನಾವು ಒಟ್ಟು ನೀರನ್ನು ಎಷ್ಟು ತುಂಬುತ್ತೇವೆ, ಅಷ್ಟು ನೀರು ಒಂದೇ ಸಾರಿ ನಾಲೆನಲ್ಲಿ ಕೊಯಿನಾ ಡ್ಯಾಂನಿಂದ ಬಂದಿದೆ. ಘಟಪ್ರಭಾದಲ್ಲಿ 35 ಅಡಿಯಷ್ಟು ನೀರು ನಾಲ್ಕು ದಿವಸಗಳಲ್ಲಿ ಹೆಚ್ಚಾಗಿದೆ. ಏತಕ್ಕೆ ಇಂತಹ ಫ್ಲಡ್, ವಾರ್ನಿಂಗ್ಸ್ ಇರಲಿಲ್ಲವೇ? ನಮಗೆ ಗೊತ್ತಾಗಲಿಲ್ಲವೆ? ಎಂದು ನೀವು ಕೇಳಬಹುದು. ನನಗನಿಸುತ್ತದೆ ಕೊಯಿನಾ ರಿಸರ್ವಾಯರ್ ಲೇವಲ್

22 ಮೀಟರ್ ಬಿಲೊ ದಿ ಫುಲ್ ಎಫ್‌ಆರ್‌ನಲ್ಲಿ ಇತ್ತು. ಕೊಯಿನಾ ಡ್ಯಾಂ 22, ಘಟಪ್ರಭಾ ಡ್ಯಾಂ 13 ಅಡಿಗಿಂತ ಕೆಳಗಡೆ ಇತ್ತು. 1,81,000 ಕ್ಯೂಸೆಕ್ಸ್ ಇನ್ ಫ್ಲೋ ಎಂದರೆ ತಾವು ಊಹಿಸಿಕೊಳ್ಳಬೇಕು. ನಮ್ಮ ಆಲಮಟ್ಟಿ ಡ್ಯಾಂಗೆ ಒಂದು ದಿವಸದಲ್ಲಿ 1,60,000 ಕ್ಯೂಸೆಕ್ಸ್ ನೀರು ಬಂದಿದೆ ಆ ನಂತರ ಇನ್ನು ನಾಲ್ಕೈದು ದಿವಸಗಳಲ್ಲಿ 1,45,000 ಕೂಸೆಕ್ಸ್ ಇನ್‌ಫ್ಲೋ ನೀರು ಬಂದಿದೆ ನಾವು ಡ್ಯಾಂಅನ್ನು ಕಟ್ಟಿರುವುದೇ 506 ನಾವು ಅವರಿಗೆ ಆವಾಗ ಆವಾಗ ಹೇಳುತ್ತೇಲೇ ಇದ್ದೇವೆ ಆದರೂ ಈ ರೀತಿಯಾಗಿ ಬಿಟ್ಟಿದೆ ಇವತ್ತು ಆರ್ಮಿ ಅಲ್ಲಿಗೆ ಏನೂ ಬೇಕಾಗಿಲ್ಲ. ನಮಗೆ ಆಗಸ್ಟ್ ತಿಂಗಳ ಮೊದಲ ವಾರದಲ್ಲಿ ನಮಗೆ ಹೆಚ್ಚು ಮಳೆ ಬರುತ್ತದೆ ಎನ್ನುವುದಕ್ಕೆ ನಮ್ಮಲ್ಲಿ ವರದಿ ಇದೆ. ಅದಕ್ಕೆ ನಾವು ಆರ್ಮಿಗೂ ಆಲರ್ಟ್ ಮಾಡಿದ್ದೇವೆ. ಕಂಟಿಜೆನ್ಸಿ ಪ್ಲಾನ್‌ನಲ್ಲಿ ನಮಗೆ ಹಣವಿದೆ, ನಮಗೇನೂ ತೊಂದರೆ ಇಲ್ಲ, ಈಗ ಸಾಕಷ್ಟು ಚೆನ್ನಾಗಿ ಮಾಡಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಮುಂದೆ ಆಗಸ್ಟ್ ತಿಂಗಳು ಬರುವುದರಿಂದ ಆರ್ಥಿಯನ್ನೇ ತರಿಸಿಕೊಂಡು ಎಲ್ಲಾ ರೀತಿಯಾದಂಥ ಕ್ರಮವನ್ನು ತೆಗೆದುಕೊಂಡು, ಯಾರಿಗೂ ತೊಂದರೆಯಾಗದ ರೀತಿ ವಸತಿ ತೊಂದರೆ ಇರಲಿ, ಊಟದ ತೊಂದರೆ ಇರಲಿ, ಔಷಧದ ತೊಂದರೆಯಿರಲಿ, ಕುಡಿಯುವ ನೀರಿಗೆ ತೊಂದರೆ ಇರಲಿ, ಎಲ್ಲಾ ಕಾರ್ಯ ಕ್ರಮವನ್ನು ಬಹಳ ಪರಿಣಾಮಕಾರಿಯಾಗಿ ಮಾಡಿದ್ದಾರೆ, ಮುಂದಕ್ಕೂ ಮಾಡುತ್ತೇವೆ ಎನ್ನುವ ಮಾತನ್ನು ಸದಸ್ಯರಿಗೆ ಹೇಳುತ್ತೇನೆ.

(೫) ಹುಬ್ಬಳ್ಳಿ ಮಹಾನಗರದಲ್ಲಿರುವ ಕೆ.ಎಂ.ಸಿ. ಆಸ್ಪತ್ರೆಯಲ್ಲಿ ಶಿಶು ಅಪಹರಣ.

ಶ್ರೀ ಅಶೋಕ್ ಕಾಟ್ವೆ (ಹುಬ್ಬಳ್ಳಿ ಕ್ಷೇತ್ರ) :- ಸನ್ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿಯ ಮಹಾನಗರದಲ್ಲಿರುವಂಥ ಕೆಎಂಸಿ ಆಸ್ಪತ್ರೆಯಿಂದ ಶಿಶು ಅಪರಹಣವಾಗಿದೆ. ಈ ಅಪಹರಣದಿಂದ ಹುಬ್ಬಳ್ಳಿ-ಧಾರವಾಡದ ಮಹಾನಗರದ ಜನ ಭಯಭೀತರಾಗಿ ದ್ದಾರೆ. ಅದರ ಬಗ್ಗೆ ಸರ್ಕಾರ ಗಮನಹರಿಸಬೇಕು. ಅದೇ ರೀತಿ ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ, ಈ ಉತ್ತರ ಕರ್ನಾಟಕದಲ್ಲೇ ಅತೀ ದೊಡ್ಡದಂಥ ಒಂದು ಕೆಎಂಸಿ, ಕರ್ನಾಟಕ ಮೆಡಿಕಲ್ ಕಾಲೇಜ್ ಏನಿದೆ ಇದರಲ್ಲಿ ಶಿಶು ಅಪಹರಣ ಒಂದೇ ಅಲ್ಲ, ಇದೇ ರೀತಿ ಬಡವರಿಗೆ ಕೊಡುವಂಥ, ಬಡಬಗ್ಗರು ರೋಗಿಗಳಿಗೆ ಕೊಡುವಂಥ ಹಣ್ಣುಹಂಪಲುಗಳು, ಹಾಲುಬ್ರೆಡ್‌ಗಳು, ಹಾಗೂ ಔಷಧಗಳೂ ಸಹ ಅಪಹರಣವಾಗುತ್ತಿದೆ. ಮೊನ್ನೆ 15 ದಿವಸದ ಹಿಂದೆ 21 ಜನ ಕ್ಲಾಸ್-4 ನೌಕರರನ್ನು ತೆಗೆದುಕೊಳ್ಳುವಾಗ ಅಲ್ಲಿ ಭ್ರಷ್ಟಾಚಾರವಾಗಿದೆ. ಒಬ್ಬೊಬ್ಬ ನೌಕರರಿಂದ 40-50 ಸಾವಿರ ರೂಪಾಯಿ ತೆಗೆದು ಕೊಂಡಿದ್ದಾರೆ ಎಂದು ನಮಗೆ ಜನರಿಂದ ದೂರುಗಳು ಬಂದಿವೆ. ಇದರ ಬಗ್ಗೆ ಸರ್ಕಾರ ಉತ್ತರವನ್ನು ಹೇಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ಧರಾಮಯ್ಯ :- ನಾಳೆ ಇದರ ಬಗ್ಗೆ ಮಾಹಿತಿ ತರಿಸಿ ಉತ್ತರ ಕೊಡುತ್ತೇವೆ.

ಅಧ್ಯಕ್ಷರು :- ಈಗ ಚಂದ್ರಕಾಂತ ಬೆಲ್ಲದ್‌ರವರು.